ಇಲ್ಲಿ ನಡೆದಾಡುವಾಗ ಒಬ್ಬರ ಹೆಜ್ಜೆ ಇನ್ನೊಬ್ಬರ ಹೆಜ್ಜೆಯಲ್ಲಿ, ಒಬ್ಬರ ನೆರಳು ಇನ್ನೊಬ್ಬರ ನೆರಳಲ್ಲಿ ಬೆರೆತು ಅನುಸಂಧಾನಗೊಳ್ಳುವ ಸ್ಥಾಯಿಯೇ ವಿಶಿಷ್ಟ ರೀತಿಯದ್ದು. ನಮ್ಮ ಸಂಗಮ ಇಲ್ಲಿ ಸಂಭವಿಸಿದ್ದೇ ಒಂದು ಅನನ್ಯ ಸಂಗತಿ. ಬಡವರು, ಶ್ರೀಮಂತರು, ಭಿಕ್ಷುಕರು, ವೇಶ್ಯೆಯರು, ಪರಿಚಿತರು, ಅಪರಿಚಿತರು ಎಲ್ಲರೂ ಒಂದೇ ಇಲ್ಲಿ. ಮೇನಕ ಟಾಕೀಸಿನಲ್ಲಿ ಮಾರ್ನಿಂಗ್ ಶೋ 'ಮರೋಚರಿತ್ರ', ಮೆಜೆಸ್ಟಿಕ್ ಥಿಯೇಟರ್‌ನಲ್ಲಿ ಮಧ್ಯಾಹ್ನದ ಮ್ಯಾಟ್ನಿ ಶೋ 'ಸಾಕ್ಷಾತ್ಕಾರ', ಅಲಂಕಾರ್ ಸಿನಿಮಾ ಮಂದಿರದಲ್ಲಿ ಸಂಜೆ ಫಸ್ಟ್ ಶೋ 'ಸಾಗರ. ಸಂಗಮಂ...'

'ಏನೀ ಮಹಾನಂದವೇ ಓ ಭಾಮಿನಿ ಏನೀ ಸಂಭ್ರಮದಂದವೇ ಬಲು ಚಂದವೇ...' ಡಿ.ವಿ. ಗುಂಡಪ್ಪನವರ ಗೀತೆಯನ್ನು ಎಷ್ಟು ರಾಗಬದ್ಧವಾಗಿ ಹಾಡಿ ಮೈಮರೆಸುತ್ತಿದ್ದಳಲ್ಲ. 'ಹೌದು, ಕೇವಲ ಪ್ರೀತಿ ಹೊಟ್ಟೆ ತುಂಬಿಸುವುದಿಲ್ಲ ನಿಜ, ಅಂಥ ಕಾಲ ಬಂದರೆ ನೀನು ಎಳನೀರು ಹೊಡಿ ಪಕ್ಕದಲ್ಲೇ ನಾನು ವಡೆ, ಬೋಂಡ ಅಂಗಡಿ ಇಡುತ್ತೇನೆ. ಇಷ್ಟಕ್ಕೂ ಬೇಕಾದಷ್ಟು ಜಮೀನು ಇದೆಯಲ್ಲ ಬೆವರು ಸುರಿಸಿ ಬೇಸಾಯ ಮಾಡಿದರಾಯ್ತು. Love's Labour's Lost...' ಎಂದು ಹೇಳುತ್ತಲೇ ಕನ್ನಡ ಎಂ.ಎ.ನ ಕರೆಸ್ಪಾಂಡೆನ್ಸ್‌ನಲ್ಲಿ ಫಸ್ಟ್ ಕ್ಲಾಸಿನಲ್ಲಿ ಪಾಸು ಮಾಡಿ ಸೈ ಅನ್ನಿಸಿಕೊಂಡಿದ್ದಳು. ನಮಗೆ 'ಓಡಿಹೋದವರು' ಎಂದೇ ಬಿರುದು ಸಿಕ್ಕಿತ್ತು. ಅದೇ ಕಥೆ ಸಾಪ್ತಾಹಿಕ ಪುರವಣಿಯಲ್ಲಿ ಪ್ರಕಟವಾದಾಗ ಮೆಚ್ಚಿ ನೂರಕ್ಕೂ ಹೆಚ್ಚು ಪತ್ರಗಳು ಬಂದಾಗ ಇವಳೇ ಮೆಚ್ಚಿದವರಿಗೆಲ್ಲ ಧನ್ಯವಾದಗಳು ತಿಳಿಸುತ್ತಾ ಪ್ರತ್ಯುತ್ತರ ಬರೆದಿದ್ದಳು.

'ಯಾಕೋ ಏನು ತುಂಬಾ ಯೋಚಿಸ್ತಿದ್ದೀಯ?' ಎಂದು ನನ್ನ ಕೈ ಮೇಲೆ ಅವಳು ಕೈ ಇಟ್ಟಾಗ ನೆನಪುಗಳ ಕೊಂಡಿ ಕಳಚಿತ್ತು. 'ಏನಿಲ್ಲ, ಮುವತ್ತು ವರ್ಷಗಳ ಹಿಂದೆ ನೀನು ಇದೇ ಮಾತುಗಳನ್ನಾಡಿದ್ದು ನೆನಪಾಯ್ತು' ಎಂದು ನಿಜವನ್ನೇ ಹೇಳಿದ್ದೆ. 'ಆಂ ಓಡಿ ಓಡಿ ಇಷ್ಟು ದೂರ ಬಂದೆವಲ್ಲ. ಯಾವತ್ತಾದರೂ ಸೋತು ಹಿಂತಿರುಗಿ ನೋಡಿದ್ದೆವಾ ಹೇಳು. ನಂಗೆ ಗೊತ್ತು ನನ್ನ ಬಳಿ ನೀನೇನು ಮುಚ್ಚಿಡಲಾಗುವುದಿಲ್ಲ. ನನ್ನ ಜ್ಯೂವಲೆರಿ ಇದೆಯಲ್ಲ. ಎಲ್ಲಾ ಮಾರಿಬಿಡು. ನಿಂಗೆ ಗೊತ್ತಲ್ಲ, ನಾವು ಮದುವೆಯಾದ ಮೂರು ವರ್ಷಗಳ ಕಾಲ ಚಿನ್ನ ಎಂದು ನನ್ನ ಮೈಮೇಲೆ ಇದ್ದದ್ದು ಅವೆನ್ಯೂ ರಸ್ತೆಯಲ್ಲಿ ಕೊಂಡುಕೊಂಡಿದ್ದ ಇನ್ನೂರು ರೂಪಾಯಿಯ ಮೂಗುನತ್ತು. ಮದುವೆಯಾಗಿ ಆರು ತಿಂಗಳಲ್ಲಿ ನೀನು ರೋಲ್ಡ್ ಗೋಲ್ಡ್ ಸರ ತಂದು ನನ್ನ ಕೊರಳಿಗೆ ಹಾಕಿದಾಗ ಎಲ್ಲರೂ ಚಿನ್ನದ ಸರವೆಂದು ಕಣ್ಣು ಅರಳಿಸಿದ್ದರು. ಕಡೆಗೂ ಅದು ರೋಲ್ಡ್ ಗೋಲ್ಡ್ ಎಂದು ಬೇರೆ ಯಾರಿಗೂ ಪತ್ತೆಯಾಗಲಿಲ್ಲ...' ಅವಳ ಮಾತನ್ನು ಮಧ್ಯದಲ್ಲಿ ತುಂಡರಿಸಿ 'ವೆನ್ನೆಲನಿಗೆ ಫೋನ್ ಮಾಡಿ ಕೊಡಲಾ' ಎಂದು ಕೇಳಿದ್ದೆ. 'ಪ್ಲೀಸ್ ಬೇಡಪ್ಪ ಬೇಡ. ವಿಷಯ ಗೊತ್ತಾದ್ರೆ ಅವನು ಸರಿಯಾಗಿ ಟ್ರೈನಿಂಗ್‌ನಲ್ಲಿ ಇನ್ವಾಲ್ವ್ ಆಗೋಕೆ ಆಗಲ್ಲ. ಇಷ್ಟಕ್ಕೂ ಅಂಥ ಸೀರಿಯಸ್ ಆದ್ರೂ ಏನಾಗಿದೆ ಈಗ. ಐಯ್ಯಾಮ್ ಸೇಫ್ಲಿ ಬ್ಯಾಕ್ ಅಲ್ವಾ. ನೀನು ಕೆಎಎಸ್ ಅವನು ಐಪಿಎಸ್... ಯಂಗೆ ನಾವು. ಲೈಫಲ್ಲಿ ಇನ್ನೆಂಥ ಪ್ರಶಸ್ತಿ ಬೇಕೋ. ಐಯ್ಯಾಮ್ ವೆರಿ ಹ್ಯಾಪಿ ಅಗೈನ್...' ಎಂದಳು.

ಅಷ್ಟರಲ್ಲಿ ಹೆಡ್ ನರ್ಸ್ ನಗುತ್ತಾ ಬಂದಿದ್ದರು. 'ಏನು ಮೇಡಮ್ ತುಂಬಾ ಜೋಷ್‌ನಲ್ಲಿದಾರೆ. ಎರಡು ದಿನ ಹೀಗೆ ಇದ್ರೆ ಐಸಿಯು ಇಂದ ವಾರ್ಡಿಗೆ ಶಿಫ್ಟ್ ಮಾಡ್ತೀವಿ. ಆಮೇಲೆ ಮೂರು ದಿನಕ್ಕೆ ಡಿಸ್ಚಾರ್ಜ್ ಮಾಡ್ತೀವಿ. ತಿಂಗಳು ಬಿಟ್ಕೊಂಡು ಮೇಡಮ್ ಮಗನ ಬಳಿಗೆ ಮಸ್ಸೂರಿಗೂ ಹೋಗಿ ಬರಬಹುದು. ಇವೊತ್ತು ಮೇಡಮ್ ಎಲ್ಲಾ ಹೇಳಿದ್ರು. ಮಗ ಐಪಿಎಸ್ ಅಂತೆ, ಟ್ರೈನಿಂಗ್‌ನಲ್ಲಿದ್ದಾನಂತೆ. ರಿಯಲಿ ಎ ಪ್ರೌಡ್ ಮದರ್. ಇಂಥ ಕಾಯಿಲೆಗಳು ಬಂದಾಗ ತುಂಬಾ ಭಾವುಕರಾಗಬಾರದು. ಭಾವುಕತೆ ಹೃದಯ ಬಡಿತವನ್ನು ಸಡನ್ನಾಗಿ ಏರುಪೇರು ಮಾಡಬಲ್ಲದು. ನೀವು ಮೇಡಮ್‌ನವರಿಂದ ದೂರವಿದ್ದಷ್ಟೂ ಇಬ್ಬರಿಗೂ ಒಳ್ಳೆಯದು. ಸೋ ಯುವರ್ ಸೇಫೆಸ್ಟ್ ಪ್ಲೇಸ್ ಈಸ್ ಅಟೆಂಡರ್ಸ್ ಲಾಂಜ್. ನಿಮ್ಮ ಹೃದಯವನ್ನು ಅರ್ಥಾತ್ ನಿಮ್ಮ ಮೇಡಮ್‌ನವರನ್ನು ಜೋಪಾನವಾಗಿ ನೋಡಿಕೊಳ್ಳಲು ಈ ಐಸಿಯುನಲ್ಲಿ ಇಬ್ಬರು ಡ್ಯೂಟಿ ಡಾಕ್ಟರ್ ಸಮೇತ ಹದಿನಾರು ಮಂದಿ ನರ್ಸುಗಳಿದ್ದೇವೆ...' ಎಂದ ಅವರ ಮಾತುಗಳೇ ನನ್ನನ್ನು ಪ್ರೀತಿಯಿಂದ ಐಸಿಯುವಿನಿಂದ ಹೊರಕ್ಕೆ ತಳ್ಳಿದ್ದವು.

ಐಸಿಯುವಿನಲ್ಲೂ ಪ್ರತಿಯೊಬ್ಬ ಪೇಷಂಟ್ ಹತ್ತಿರ ಒಬ್ಬೊಬ್ಬರನ್ನಾದರೂ ಅವರವರ ಕಡೆಯವರನ್ನು ಇರಲು ಬಿಡಬೇಕು. ಆಗ ರೋಗಿ ಮತ್ತು ರೋಗಿಯ